# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ:09.11.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಭೆಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀಮತಿ.ಸಂಗೀತಾ.ಆರ್ ಸ.ಅ 134. | ಕಾರ್ಯದರ್ಶಿ. |
| 3. | ಶ್ರೀ. ದೊಡ್ಡವೀರಪ್ಪ ಸ.ಅ | BWSSB |
| 4. | ಶ್ರೀ. ಎಸ್.ಮುನಿಯಪ್ಪ | ASI POLICE |
| 5. | ಶ್ರೀ. ಯಶವಂತ್ ರಾವ್. | ಸಾರ್ವಜನಿಕರು |
| 6. | ಶ್ರೀಮತಿ.ಅರ್ಚನ | ಸಾರ್ವಜನಿಕರು |
| 7. | ಶ್ರೀಮತಿ.ಪ್ರಮೀಳ | ಸಾರ್ವಜನಿಕರು |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ.ಆರ್.ಸಂಗೀತಾ. ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

1. ಬಾಪೂಜಿನಗರದ ಹೊಸಗುಡ್ಡದಹಳ್ಳಿ ಎಚ್ ರಸ್ತೆ ಬಳಿ ಚರಂಡಿಯಲ್ಲಿ ನೀರು ಹರಿಯದೆ ಅಲ್ಲೇ ಶೇಕರವಾಗಿ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಈ ಕಾಮಗಾರಿಯು ಗ್ಯಾಂಗ್ ಮ್ಯಾನ್ ರವರಿಂದ ತೆರವುಗೊಳಿಸಲು ಸಾಧ್ಯವಿಲ್ಲದ ಕಾರಣ ಕಾರ್ಯಪಾಲಕ ಅಭಿಯಂತರರೊಂದಿಗೆ ಚರ್ಚಿಸಿದ್ದು, ಗುತ್ತಿಗೆದಾರರನ್ನು ಈ ವಾರದಲ್ಲಿ ಗೊತ್ತುಪಡಿಸಿ ಕಾಮಗಾರಿ ಈ ವಾರದಲ್ಲಿ ಪ್ರಾರಂಭಿಸಲು ಕ್ರಮಕೈಗೊಳ್ಳುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

2. ವಾರ್ಡ್ ನಲ್ಲಿ CC Camera ಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹಾಗೂ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಲ್ಲಿಯೇ CC Camera ಗಳನ್ನು ಅಳವಡಿಸಲು ಸಾರ್ವಜನಿಕರು ಕೋರಿದರು.

   ರಂಗ ಮಂದಿರದ ಮೈದಾನದ ಸುತ್ತಮುತ್ತ ಹುಡುಗರು ಅನಾವಶ್ಯಕವಾಗಿ ಓಡಾಡುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಈಗ ಸ್ವಲ್ಪ ಸಮಸ್ಯೆ ಕಮ್ಮಿಯಾಗಿದೆ. ಬೀಟ್ ಪೋಲಿಸ್ ರವರನ್ನು ಇನ್ನು ಎರಡು ಹೆಚ್ಚಿನ ರೌಂಡ್ ಮಾಡಿಸಿ ಸಮಸ್ಯೆಯನ್ನು ಬಗೆಹರಿಸಿಕೊಡಲು ಎ.ಎಸ್.ಐ ರವರನ್ನು ಸಾರ್ವಜನಿಕರು ಕೋರಿದರು.

   ಎ.ಎಸ್.ಐ ರವರು ಒಪ್ಪಿ ಕಾರ್ಯಗತಗೊಳಿಸುವುದಾಗಿ ಸಭೆಗೆ ತಿಳಿಸಿದರು.

   ಸಾರ್ವಜನಿಕರು – ಬಿ.ಬಿ.ಎಂ.ಪಿ ಇಲಾಖೆಯವರು – ಪೋಲಿಸ್ ಇಲಾಖೆಯವರು ಒಟ್ಟುಗೂಡಿ ಅನಧಿಕೃತವಾಗಿ ವಾರ್ಡ್‌ನ ರಸ್ತೆಯಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಲು ಕಾರ್ಯಚರಣೆ ನಡೆಸಲು ದಿನಾಂಕ ಗೂತ್ತುಪಡಿಸಿ ಕ್ರಮ ಕೈಗೊಳ್ಳಲು ಕಾರ್ಯದರ್ಶಿರವರಿಗೆ ಅಧ್ಯಕ್ಷರು ಸೂಚಿಸಿದರು.

3. ಈ ಪಾಕ್ಷಿಕದಲ್ಲಿ ರೂ: 8.40 ಲಕ್ಷಗಳನ್ನು ತೆರಿಗೆ ಮೂಲಕ ಸಂಗ್ರಹಿಸಲಾಗಿದೆ ಎಂದು ಕಂದಾಯ ಪರಿವೀಕ್ಷಕರು ದೂರವಾಣಿ ಮೂಲಕ ಸಭೆಗೆ ತಿಳಿಸಿದರು.

4. ಸಾರ್ವಜನಿಕರಿಂದ ಕೆಳಕಂಡ ಸ್ಥಳಗಳಲ್ಲಿ, ವಿದ್ಯುತ್ ದೀಪಗಳು ಬರುತ್ತಿಲ್ಲವೆಂದು ದೂರವಾಣಿ ಮೂಲಕ ಕಾರ್ಯ ನಿರೀಕ್ಷರಿಗೆ ತಿಳಿಸಿದರು Street Light Agency ಗೆ ದೂರವಾಣಿ ಮುಖೇನ ತಿಳಿಸಿ ಸಮಸ್ಯೆ ಬಗೆಹರಿಸಲಾಗಿದೆ. ಮುತ್ತಾಂಜನೆಯ ದೇವಾಲಯ ಬಳಿ, ಶಾಮಣ್ಣ ಗಾರ್ಡನ್, ಟಿಪ್ಪು ಮಸೀದಿ ರಸ್ತೆ ಹಾಗೂ ಬಾಪೂಜಿನಗರದ 4ನೇ ಅಡ್ಡರಸ್ತೆ ಮತ್ತು ಎ ರಸ್ತೆ ಹೊಸಗುಡ್ಡದಹಳ್ಳಿ ತಿರುವು.

5. ಶಾಮಣ್ಣ ಗಾರ್ಡನ್ 3ನೇ ಮುಖ್ಯರಸ್ತೆ, 6ನೇ ಕ್ರಾಸ್ ತಿರುವಿನಲ್ಲಿ ನೀರು ನಿಂತಿದ್ದು ಬಹಳ ಸಮಸ್ಯೆಯಾಗಿದ್ದು ಅದನ್ನು ಗುತ್ತಿಗೆದಾರರೊಂದಿಗೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ರೈಲ್ವೆ ಸಮಾನಾಂತರ ರಸ್ತೆಯಿಂದ 5ನೇ ಅಡ್ಡರಸ್ತೆಯ ವರೆಗೆ ಈಗಾಗಲೇ ತೆರವುಗೊಳಿಸಲಾಗಿರುತ್ತದೆ.

6. ವಾರ್ಡ್‌ನ ಪಾರ್ಕ್‌ಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸುವಂತೆ ಕೋರಿ ಯೋಜನಾ ವಿಭಾಗಕ್ಕೆ ಮನವಿ ಸಲ್ಲಿಸಿ ಕ್ರಮ ಕೈಗೊಳ್ಳುವುದಾಗಿ ಕಾರ್ಯದರ್ಶಿ ರವರು ಸಭೆಗೆ ತಿಳಿಸಿದರು.

7. ಬಾಪೂಜಿನಗರದ 5ನೇ ಅಡ್ಡರಸ್ತೆಯಲ್ಲಿ, BWSSB ರಸ್ತೆಯಲ್ಲಿ ಇರುವ Manhole ನಿಂದ ನೀರು ಹೊರ ಬರುತ್ತಿದ್ದು ಸಾರ್ವಜನಿಕರು ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆಯೆಂದು ಕಾರ್ಯ ನಿರೀಕ್ಷಕರು – ಸಮಸ್ಯೆಯನ್ನು ಶ್ರೀ. ದೊಡ್ಡವೀರಪ್ಪ ಸ.ಅ BWSSB ರವರಿಗೆ ಮನವಿ ಮಾಡಲಾಯಿತು ಬಾಪೂಜಿನಗರದ 5ನೇ ಅಡ್ಡರಸ್ತೆಯಲ್ಲಿ, ಹೊಸದಾಗಿ Manhole ಕಟ್ಟಲಾಗಿರುತ್ತದೆ ಹಾಗೂ ಇನ್ನುಳಿದ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಿಕೊಡುವುದಾಗಿ ಶ್ರೀ. ದೊಡ್ಡವೀರಪ್ಪ ಸ.ಅ ರವರು ಎಂದು ಸಭೆಗೆ ತಿಳಿಸಿದರು.

8. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತಿದಿನ ಕೋವಿಡ್-19 ಟೆಸ್ಟ್‌ಗಳನ್ನು ನಡೆಸಲಾಗುತ್ತಿದೆ ಹಾಗೂ ಪ್ರತಿ ದಿನ ಲಸಿಕೆಯನ್ನು ನೀಡಲಾಗುತ್ತಿದೆ. ಆರೋಗ್ಯ ಕೇಂದ್ರದಲ್ಲಿ ನೀಡಲಾಗುತ್ತಿದೆ.

ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ-ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 09.11.2021

R Sangeet

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂ: 134.